# ಪ್ರೇಮಪಕ್ಷಿಗಳ ಸಂಗದಲ್ಲಿ..

ಪ್ರಕೃತಿಯಲ್ಲಿ ಜೀವ ಸಂಕುಲ ಮುಂದುವರಿಯುವ ಪ್ರಕ್ರಿಯೆ ಎಷ್ಟೊಂದು ವೈವಿಧ್ಯಮಯ! ಹಕ್ಕಿಗಳಿಂದಲೂ ಮನುಷ್ಯರು ಕಲಿಯಬೇಕಾದ ಎಷ್ಟೊಂದು ಪಾಠಗಳಿವೆ!

■ ಡಾ. ನಿರಂಜನ ವಾನಳ್ಳಿ



ಚಿತ್ರ: ಇರ್ಷಾದ್ ಎಂ

ನಮ್ಮ ಮನೆಯಲ್ಲಿ ಪ್ರೇಮ ಪಕ್ಷಿಗಳ ಕಲರವ ಶುರುವಾದುದು ಒಂದು ಆಕಸ್ಮಿಕ. ಮನೆಗೆ ಹೊಸದಾಗಿ ಬಂದ ಎರಡು ಪುಟ್ಟ ಜೀವಿಗಳು ನಮಗೆ ಹೆಚ್ಚುವರಿ ಜವಾಬ್ದಾರಿಗಳನ್ನು ತಂದಿಟ್ಟವು. ಉದಾಹರಣೆಗೆ ಕಿಟಕಿಯ ಬಾಗಿಲುಗಳನ್ನು ನಾವು ಬೇಕಾಬಿಟ್ಟಿ ತೆರೆದೇ ಇಡುತ್ತಿದ್ದೆವು. ಬೆಕ್ಕು ಇದಕ್ಕಾಗಿ ಹೊಂಚು ಹಾಕುವುದು ನಮ್ಮ ಗಮನಕ್ಕೆ ಬಂದಿರಲಿಲ್ಲ. ಒಮ್ಮೆ ನಾವಿಲ್ಲದ ಸಮಯ ನೋಡಿ ಒಳನುಗ್ಗಿದ ಬೆಕ್ಕು, ಈ ಪಾಪದ ಜೀವಿಗಳನ್ನು ಹರಿದು ಮುಕ್ಕಲು ಇನ್ನಿಲ್ಲದ ಪ್ರಯತ್ನ ಮಾಡಿತು. ಬೆಕ್ಕಿನ ಉಪಟಳಕ್ಕೆ ಪಂಜರ ಕೆಳಕ್ಕೆ ಬಿದ್ದು ಅದರ ಸದ್ದಿಗೆ ನಾವೆಲ್ಲ ಓಡಿಬರುವಾಗ ಬೆಕ್ಕು ಜೀವ ಉಳಿದರೆ ಸಾಕೆಂದು ಪಲಾಯನ ಮಾಡಿತು.

ಮೊದಲಿಗೆ ನಮ್ಮ ಮನೆಗೆ ಬಂದವು ಎರಡು ಬಿಳಿ ಪ್ರೇಮ ಪಕ್ಷಿಗಳು. ಅದರಲ್ಲಿ ಒಂದು ಪಕ್ಷಿ ನಮ್ಮನೆಗೆ ಬರುವಾಗಲೇ ವಯಸ್ಸಾದಂತೆ ಇತ್ತು. ಅವು ಎರಡು ಜೊತೆಯಾಗಿದ್ದವೇ ವಿನಾ ಹೆಣ್ಣು ಗಂಡಿನ ಜೊತೆಯೋ ನಮಗೆ ಗೊತ್ತಿರಲಿಲ್ಲ. ಆದರೆ ಎಷ್ಟು ದಿನವಾದರೂ ಅವು ಮರಿ ಹಾಕಲೇ ಇಲ್ಲ. ಕೊನೆಗೆ ಒಂದು ದಿನ ಮುದಿಯ ಹಕ್ಕಿಯಂತೆ ಕಾಣುತ್ತಿದ್ದ ಬಿಳಿಯ ಹಕ್ಕಿ ನಮ್ಮೆದುರೇ ಪ್ರಾಣ ಬಿಟ್ಟಿತು. ನವಣೆ ತಿನ್ನುತ್ತಾ ತಿನ್ನುತ್ತಾ ಅದು ಧರೆಗೆ ಒರಗಿದ್ದು ಆಘಾತಕಾರಿಯಾಗಿತ್ತು. ನಮ್ಮ ಮನೆಯ ಪುಟ್ಟ ಕೈತೋಟದಲ್ಲಿ ಅದನ್ನು ಮಣ್ಣು ಮಾಡಿದೆವು.

ಇದಾದ ಬಳಿಕ ನಮಗೆ ಇನ್ನೊಂದು ಸವಾಲು ಎದುರಾಯ್ತು. ಈ ಹಕ್ಕಿಗಳ ಹೆಸರೇ ಲವ್ ಬರ್ಡ್ಸ್. ಇವು ಒಂದನ್ನು ಒಂದು ಅಗಲಿ ಇರಲಾರವು ಎಂಬುದು ಸರ್ವವೇದ್ಯ. ಹಾಗಾದರೆ ಈ ಒಂಟಿ ಹಕ್ಕಿಯನ್ನು ಏನು ಮಾಡುವುದು? ಮತ್ತೆ ಬಹಳ ಹಕ್ಕಿಗಳಿರುವ ಅಪರಿಚಿತ ಮನೆಯ ಮೊರೆ ಹೋಗುವುದು ಅನಿವಾರ್ಯವಾಯ್ತು. ಅವರು ಧಾರಾಳತನದಿಂದ 'ನಿಮ್ಮ ಹಕ್ಕಿ ತಂದುಬಿಡಿ. ಇಷ್ಟೊಂದು ಇರುವಾಗ ಅದೊಂದು ಹೆಚ್ಚಾಗದು. ನಿಮಗೆ ಒಂದು ಜೊತೆ ನೀಲಿ ಹಕ್ಕಿ ಕೊಡುತ್ತೇವೆ' ಎಂದಾಗ ತಲೆಯ ಮೇಲಿದ್ದ ಮಣಭಾರ ಇಳಿದಂತಾಯ್ತು.

ಹಾಗೆ ನಮ್ಮನೆಗೆ ಹೊಸದಾಗಿ ಪ್ರವೇಶ ಮಾಡಿದ್ದು ಒಂದು ಜೊತೆ ನೀಲಿ ಹಕ್ಕಿಗಳು. ಪುಟ್ಟ ಹಕ್ಕಿಗಳು ಇನ್ನೂ ಯೌವನಕ್ಕೆ ಕಾಲಿಡುತ್ತಿರುವ ಉಮೇದು. ಅವುಗಳ ಚಟುವಟಿಕೆ –ಚೀರಾಟ –ಹಾರಾಟ ಮಲಗಿದಂತಿದ್ದ ನಮ್ಮನೆಗೆ ಹೊಸ ಉಲ್ಲಾಸ ತಂದಿತು. ಕೆಲವು ದಿನಗಳ ಬಳಿಕ, ಒಂದು ಬೆಳಿಗ್ಗೆ ನೋಡಿದರೆ ಒಂದು ಮರಿ ಗಡಿಗೆಯೊಳಗೆ ಹೋಗಿ ಸ್ವಚ್ಛ ಮಾಡುತ್ತಿದೆ. ಗಡಿಗೆಯೊಳಗೆ ಎಷ್ಟೋ ಕಾಲದಿಂದ ಶೇಖರಗೊಂಡ ಗಲೀಜನ್ನೆಲ್ಲ ತನ್ನ ಪುಕ್ಕದಿಂದ ಹಾರಿಸಿ ಕೊಕ್ಕಿನಿಂದ ಹೊರತಂದು ಹಾಕಿ, ಗಡಿಗೆಯನ್ನು ಸುರಕ್ಷಿತ ಕೋಣೆಯನ್ನಾಗಿ ಮಾಡಿ ಕೊಳ್ಳುತ್ತಿರುವುದನ್ನು ಕಂಡಾಗ ಹೊಸದೇನೋ ನಡೆಯುವುದರ ಸೂಚನೆ ಸಿಕ್ಕಿತು.

ಅಂದು ಶುರುವಾಯ್ತು ಅವುಗಳ ರಾಸಲೀಲೆ– ಪ್ರಣಯದಾಟ. ಮತ್ತೆ ನಾಲ್ಕೇ ದಿನಕ್ಕೆ ಅದರ ಫಲವೆಂಬಂತೆ ಒಂದು ಬಿಳಿ ಮೊಟ್ಟೆ ಹೊರಬಂದಿದೆ! ತಾಯಿ ಅದರ ಮೇಲೆ ಕುಳಿತು ಕಾವು ಕೊಡುತ್ತಿದೆ. ತಂದೆ ಹೊರಗಿಂದ ನವಣೆಯನ್ನು ತಂದು ಹೆಂಡತಿಯ ಬಾಯಿಗೆ ಇಡುತ್ತಿದೆ. ನೋಡನೋಡುತ್ತಿದ್ದಂತೆ ಒಂದು ಎರಡು, ಮೂರು, ನಾಲ್ಕು... ಹೀಗೆ ಒಟ್ಟೂ ಏಳು ಮೊಟ್ಟೆಗಳು ಹೊರಬಂದಿವೆ. ಅವನ್ನು ನೋಡಬೇಕೆಂದು ನಾವು ಪಂಜರದ ಬಳಿ ಸುಳಿದರೆ ಸಾಕು, ತಾಯಿ ರೆಕ್ಕೆಗಳ ಅಡಿಯಲ್ಲಿ ಅವನ್ನು ಮುಚ್ಚಿಕೊಂಡು ಕೂರುತ್ತದೆ. ನಾವು ದೂರ ಹೋಗುವವರೆಗೂ ತಾಯಿ ಅಲ್ಲಾಡುವುದಿಲ್ಲ. ಭಲೇ ಪ್ರಕೃತಿಯ ರಕ್ಷಣಾ ಕವಚವೇ ಎನಿಸಿತು!

ಪಂಜರದೊಳಗೆ ನಡೆದಿದ್ದ ಸೃಷ್ಟಿ ವಿಸ್ಮಯವನ್ನು ಗಮನಿಸುತ್ತಾ ಇದ್ದೆವು. ಒಂದು ಬೆಳಿಗ್ಗೆ ನೋಡಿದರೆ ಒಂದು ಮೊಟ್ಟೆ ಕೆಳಗೆ ಬಿದ್ದಿದೆ. ಅದು ಟೊಳ್ಳುಮೊಟ್ಟೆ. ಅದು ಮರಿಯಾಗುವ ಭರವಸೆ ಕಾಣದ್ದರಿಂದ ತಾಯಿಯೇ ಹೊರಗೆಸೆದಿರಬೇಕು! ಆದರೆ ಆ ಗಡಿಗೆಯೊಳಗಿಂದ ತಾಯಿ ಮೊಟ್ಟೆಯನ್ನು ಹೊರತಂದು ಎಸೆದುದು ಹೇಗೆಂಬುದು ಅರ್ಥವಾಗಲಿಲ್ಲ. ಹಾಗೆ ಏಳರಲ್ಲಿ ಮೂರು ಮೊಟ್ಟೆಗಳನ್ನು ತಾಯಿ ಹೊರಗೆಸೆಯಿತು. ಪ್ರಕೃತಿಯೇ ಸದೃಢ ಸಂಕುಲವನ್ನು ಆಯ್ಕೆಮಾಡುವ ಪರಿ ಇದೆಂದು ಅರ್ಥವಾಯ್ತು.

ಉಳಿದ ನಾಲ್ಕು ಮೊಟ್ಟೆಗಳಿಗೆ ತಾಯಿ ಕಾವು ಕೊಡುವುದನ್ನು ಮುಂದುವರಿಸಿದಂತೆ ಹೊರಗಿರುವ ಗಂಡಿನ ಚಡಪಡಿಕೆ ನೋಡಬೇಕು! ಒಂದು ದಿನಬೆಳಿಗ್ಗೆ ಎದ್ದು ಬರುವಾಗ ಗೆಜ್ಜೆ ನಾದದಂಥ ಕ್ಷೀಣ ಧ್ವನಿ ಗಡಿಗೆಯೊಳಗಿಂದ ಕೇಳಿಬರುತ್ತಿತ್ತು. ಬಗ್ಗಿ ಮಡಕೆಯೊಳಗೆ ನೋಡಿದೆ. ಮಾಂಸದ ಮುದ್ದೆಯಂತಿರುವ ಮರಿ. ದೊಡ್ಡ ತಲೆ, ಕೈಕಾಲು ಸಣ್ಣ ಎಂಬಂತಿದೆ. ಆಗಷ್ಟೆ ಮೊಟ್ಟೆಯೊಡೆದು ಮರಿ ಹೊರಬಂದಿದೆ. ಅಮ್ಮ ಅದನ್ನು ಹೊಟ್ಟೆಯೊಳಗೆ ಅಮುಕಿ ಇಟ್ಟುಕೊಳ್ಳುತ್ತಿದೆ. ಒಂದು ಕ್ಷಣ ಅಮ್ಮನ ಬಿಸಿ ತಾಕದಿದ್ದರೂ ಮರಿಯ ಸಂಕಟ ನೋಡಬೇಕು.

ಈಗ ಅಪ್ಪನ ಪಾತ್ರಧಾರಿ ಭಾರಿ ಆಕ್ಟೀವ್! ಕೆಳಗಿನಿಂದ ನವಣೆಯನ್ನು ಒಡೆದು ತಂದು ಹೆಂಡತಿಗೆ ಕೊಡುತ್ತಿದ್ದ. ತಾಯಿಯ ಸಂಭ್ರಮಕ್ಕೆ ಎಣೆಯೇ ಇಲ್ಲ. ಹಾಗೆಯೇ ಒಂದೊಂದಾಗಿ ನಾಲ್ಕು ಮರಿಗಳು ಹೊರಬಂದವು. ಅವುಗಳಲ್ಲಿ ಎರಡು ಬಹಳ ಚುರುಕು. ಒಂದು ಮಾತ್ರ ದಡ್ಡ ಶಿಖಾಮಣಿ! ಚಿಕ್ಕ ಚುಕ್ಕೆಯಂತಿದ್ದ ಈ ಮರಿಗಳು ದೇಹದ ಗಾತ್ರದಲ್ಲೂ ಸಂವಹನ ಸಾಧ್ಯತೆಗಳಲ್ಲೂ ಬೆಳೆದ ರೀತಿ ಮಾತ್ರ ಅತ್ಯಂತ ವೇಗದ್ದು ಹಾಗೂ ಊಹಿಸಲಾಗದ್ದು. ನೋಡನೋಡುತ್ತಿದ್ದಂತೆ ಮರಿಗಳು ಹೆಬ್ಬೆಟ್ಟಿನ ಗಾತ್ರಕ್ಕೆ ಬಂದವು. ಕಪ್ಪುಕಣ್ಣುಗಳು ತೆರೆದುಕೊಂಡವು. ತಲೆಮೇಲೆ ನೀಲಿ ಕೂದಲು. ನಿಧಾನವಾಗಿ ಗರಿಗಳು ಮೂಡಿದವು. ಚಿಚಿಚಿಚಿ ಕೂಗಾಟದಿಂದ ಮನೆತುಂಬಿತು.

ಈ ಹಕ್ಕಿಗಳಿಗೋ ಗಡಿಗೆಯೇ ಬ್ರಹ್ಮಾಂಡ. ನಿಧಾನವಾಗಿ ಕತ್ತು ಹೊರಚಾಚಿ ಹೊರಗಿನ ಜಗತ್ತನ್ನು ನೋಡುವ ತವಕ. ಮಡಕೆಯ ಪೊಟರೆಯಿಂದ ಅವು ಹೊರಬರಲು ಹವಣಿಸುತ್ತಿದ್ದವು. ಆದರೆ ಹೊರಬಂದರೆ ಮಡಕೆಯಿಂದ ದೊಪ್ಪನೆ ಕೆಳಬೀಳುವುದು ಖಂಡಿತ. ಹಾಗೆ ಬಿದ್ದು ಕೈಕಾಲು ಮುರಿದರೆ ಏನು ಕತೆಯೆಂದು ನಮ್ಮ ಚಿಂತೆ.

ನಮ್ಮ ಆಶ್ಚರ್ಯಕ್ಕೆ ತಾಯಿಹಕ್ಕಿ ಒಂದು ದಿನ ಪೊಟರೆಯಿಂದ ನಿರ್ದಾಕ್ಷಿಣ್ಯವಾಗಿ ಮಗುವನ್ನು ತಳ್ಳಿಬಿಟ್ಟು, ಮೇಲೆ ನಿಂತು ನೋಡತೊಡಗಿತು. ಕೆಳಬಿದ್ದ ಮಗುವಿಗೆ ಏನೂ ಆಗಿಲ್ಲ. ಪಿಳಿಪಿಳಿ ಕಣ್ಣು ಬಿಡುತ್ತಾ ಕುಳಿತಿತ್ತು. ಅದರ ಎದುರು ನವಣೆಯ ರಾಶಿಯೇ ಇದ್ದರೂ ತಿನ್ನಲು ಬಾರದು. ತಾಯಿ ಒಮ್ಮೆ ಕೆಳ ಬಂತು. ಕೊಕ್ಕಿನಲ್ಲಿ ಕಾಳನ್ನು ಕುಕ್ಕಿ ಒಡೆಯುವುದನ್ನು ತೋರಿಸಿಕೊಟ್ಟು ಮೇಲೆ ಹಾರಿತು. ಮೇಲಿನಿಂದ ತಂದೆ ತಾಯಿ ನೋಡುತ್ತಾ ಕುಳಿತಿದ್ದರೆ ಕೆಳಗೆ ಬಿದ್ದಿದ್ದ ಮರಿ ಎಷ್ಟೇ ಹೊತ್ತು ಕರೆದರೂ ತಾಯಿ ಬರಲಿಲ್ಲ. ಬೇಜಾರಾಗಿ ಮರಿ ನವಣೆಯ ರಾಶಿಯ ಬಳಿ ಬಂತು. ಅಮ್ಮ ಹೇಳಿಕೊಟ್ಟ ಹಾಗೆ ಒಂದೊಂದೇ ಕಾಳನ್ನು ಒಡೆಯತೊಡಗಿತು. ಸ್ವಲ್ಪ ಹೊತ್ತಿಗೆ ಮರಿಗೆ ನವಣೆಯ ಕಾಳು ಒಡೆದು ತಿನ್ನುವ ಕ್ರಮ ರೂಢಿಯಾಯ್ತು!

ಹಿಂದಿನ ಜೋಡಿಯಂತಲ್ಲ, ಈ ಜೋಡಿಗಳು. ಎರಡೆರಡು ತಿಂಗಳಿಗೆ ಮರಿ ಮಾಡತೊಡಗಿದವು. ನಾವು ತಂದ ಪಂಜರ ಎರಡು ಹಕ್ಕಿಗಳಿಗೆ ಸಾಲುವಂತಿತ್ತು. ಈಗ ನಾಲ್ಕು ಹುಟ್ಟಿದಾಗ ಏನು ಮಾಡಬೇಕು? ಮೊದಲು ಹುಟ್ಟಿದ ಮರಿಗಳನ್ನು ತಾಯಿಯೇ ಕಚ್ಚಿ ಓಡಿಸತೊಡಗಿತ್ತು. ಹೊಸ ಮರಿಗೆ ಜಾಗ ಮಾಡಿಕೊಡಲು ನೀನು ಜಾಗ ಖಾಲಿ ಮಾಡಬೇಕು ಎಂಬ ಸೂಚನೆಯದು! ತಾಯಿ ಮತ್ತೆ ಗಡಿಗೆಯನ್ನು ಸ್ವಚ್ಛಗೊಳಿಸುವ ಕಾಯಕದಲ್ಲಿ ನಿರತವಾಗಿತ್ತು! ಹಕ್ಕಿ ಮರಿಗಳ ಕಷ್ಟ ನೋಡಲಾಗದೇ ನಾವೇ ಇನ್ನೊಂದು ಪಂಜರದಲ್ಲಿ ಹಿರಿಯ ಮಕ್ಕಳನ್ನು ಬಿಟ್ಟೆವು. ಮರುದಿನ ಗೆಳೆಯರಿಗೆ ದಾನ ಮಾಡಿದೆವು. ಗಡಿಗೆಯಲ್ಲಿ ಮತ್ತೆ ಮೊಟ್ಟೆ ಮರಿ– ಈ ಚಕ್ರ ಸುತ್ತತೊಡಗಿತು. ಒಂದೆರಡು ಮರಿಗಳು ಹೊರಬಂದು ನವಣೆ ತಿನ್ನುವಷ್ಟು ಗಟ್ಟಿಯಾಗುವಷ್ಟರಲ್ಲಿ ತಾಯಿ ಮತ್ತೆ ಗಡಿಗೆ ಸ್ವಚ್ಛ ಮಾಡುತ್ತಿತು. ನಮ್ಮನೆಯಲ್ಲಿ ಖಾಯಂ ಬಾಣಂತನ!

ಈ ಪುಟ್ಟ ಜೀವಿಗಳು ಈಗ ನಮ್ಮನೆಯ ಭಾಗವೇ ಆಗಿಬಿಟ್ಟಿವೆ. ಏಕಾಂಗಿ ಕುಳಿತಿರುವಾಗ ಮನೆಯಲ್ಲಿ ನಾನು ಏಕಾಂಗಿಯಲ್ಲ ಎಂಬ ಸಾಂತ್ವನವನ್ನು ಅವು ನೀಡುತ್ತವೆ. ಮಕ್ಕಳು ಶಾಲೆಯಿಂದ ಮನೆಗೆ ಬಂದಾಗ ಅವುಗಳನ್ನು ಮಾತನಾಡಿಸದಿದ್ದರೆ ಕರೆದು ಮಾತನಾಡಿಸುತ್ತವೆ. ಮನೆಗೆ ಬಂದ ಸ್ನೇಹಿತರಿಗೂ ಈ ಹಕ್ಕಿಗಳನ್ನು ಮಾತನಾಡಿಸಲೇಬೇಕು..